ನಿರ್ದೇಶಕರು(ಇ-ಆಡಳಿತ),ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:22.02.2019 ರಂದು ಪೂರ್ವಾಹ್ನ:11:00 ಗಂಟೆಗೆ ಇಲಾಖೆಯ ಸಭಾ ಕೊಠಡಿಯಲ್ಲಿ **Implementation of e-Office in Rural Development & Panchayath Raj Department** (EMD, Training, Connectivity, etc) ಬಗ್ಗೆ ಜರುಗಿದ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು: (ಶ್ರೀ/ಶ್ರೀಮತಿ)</u>

1. ಎಸ್.ಎಂ. ಜುಲ್‌ಫಿಖಾರ್‌ಉಲ್ಲಾ, ನಿರ್ದೇಶಕರು (ಇ-ಆಡಳಿತ) (ಪ್ರ), ಗ್ರಾಅಪ ಇಲಾಖೆ, ಬೆಂಗಳೂರು.
2. ಸಿದ್ದೇಶ್ ಪೊತಲಕಟ್ಟಿ, ಉಪಕಾರ್ಯದರ್ಶಿಗಳು, ಆಡಳಿತ-1, ಗ್ರಾಅಪ ಇಲಾಖೆ, ಬೆಂಗಳೂರು.
3. ಅಪರ್ಣ ಪಾವಟೆ, ಉಪಕಾರ್ಯದರ್ಶಿಗಳು, ಆಡಳಿತ-2, ಗ್ರಾಅಪ ಇಲಾಖೆ, ಬೆಂಗಳೂರು.
4. ಹೆಚ್.ಎಲ್. ಪ್ರಭಾಕರ, ಯೋಜನಾ ನಿರ್ದೇಶಕರು, ಸಿಆಸು(ಇ-ಆಡಳಿತ) ಇಲಾಖೆ, ಬೆಂಗಳೂರು.
5. ಸತೀಶ ಎಂ.ಆರ್. ಯೋಜನಾ ವ್ಯವಸ್ಥಾಪಕರು (ಇ-ಆಫೀಸ್), ಸಿಇಜಿ, ಸಿಆಸು(ಇ-ಆಡಳಿತ) ಇಲಾಖೆ, ಬೆಂಗಳೂರು.
6. ಮುಬಾರಕ್ ಅಹ್ಮದ್, ಅಧೀನ ಕಾರ್ಯದರ್ಶಿಗಳು, ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
7. ಗಗನ್ ಎ.ಎಸ್, ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು
8. ಶಿಲ್ಪ ಈ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
9. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
10. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸಹಾಯಕ ನಿರ್ದೇಶಕರು (ಇ-ಆಡಳಿತ) ರವರು ಸ್ವಾಗತಿಸಿದರು. ರಾಜ್ಯ ಯೋಜನಾ ವ್ಯವಸ್ಥಾಪಕರು ಮಾತನಾಡಿ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳಲ್ಲಿ e-Office ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಲು ಸಭೆಯನ್ನು ಕರೆಯಲಾಗಿದೆ ಎಂದು ಸಭೆಗೆ ತಿಳಿಸಿದರು.

1. e-Office ಅನ್ನು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಲು ನಿರ್ಧರಿಸಿದ್ದು, ಅದರಂತೆ ಗ್ರಾಮ ಪಂಚಾಯತಿಗಳಲ್ಲಿ e-Office ಅನ್ನು ಅನುಷ್ಠಾನ ಮಾಡಲು ತೀರ್ಮಾನಿಸಿದ್ದಲ್ಲಿ, ಗ್ರಾಮ ಪಂಚಾಯತಿಗಳಲ್ಲಿಯೂ ಸಹ e-Office ಅನುಷ್ಠಾನ ಮಾಡುವುದಾಗಿ ಯೋಜನಾ ನಿರ್ದೇಶಕರು, e-Office ರವರು ಸಭೆಗೆ ತಿಳಿಸಿದರು.
2. ಈ ಸಂಬಂಧ ಉಪಕಾರ್ಯದರ್ಶಿರವರು ಮಾತನಾಡಿ, ಪ್ರಸ್ತುತ ಹೆಚ್ಚಿನ ಗ್ರಾಮ ಪಂಚಾಯತಿಗಳಲ್ಲಿ ಎಲ್ಲಾ ಕಡತಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಒಬ್ಬರೇ ನಿರ್ವಹಿಸುವುದರಿಂದ, ಗ್ರಾಮ ಪಂಚಾಯತಿಗಳಲ್ಲಿ e-Office ಅನುಷ್ಠಾನ ಮಾಡುವ ಅವಶ್ಯಕತೆಯಿರುವುದಿಲ್ಲ ಮತ್ತು ಮುಂದಿನ ದಿನಗಳಲ್ಲಿ ಈ ಬಗ್ಗೆ ಪರಿಶೀಲಿಸಬಹುದು ಎಂದು ತಿಳಿಸಿದರು.
3. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ e-Office ಅನುಷ್ಠಾನ ಮಾಡಲು ಬೇಕಾದ ಕಂಪ್ಯೂಟರ್ ಪರಿಕರಗಳನ್ನು ಹಾಗೂ DSC ಖರೀದಿಸಲು ಅನುದಾನವನ್ನು ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.
4. ಈಗಾಗಲೇ 07 ಜಿಲ್ಲಾ ಪಂಚಾಯತ್‌ಗಳಲ್ಲಿ e-Office ಅನುಷ್ಠಾನವಾಗಿದ್ದು, 03 ಜಿಲ್ಲಾ ಪಂಚಾಯತ್‌ಗಳಲ್ಲಿ e-Office ಅನುಷ್ಠಾನ ಮಟ್ಟದಲ್ಲಿದ್ದು, EMD(Employee Master Data) ಯನ್ನು ತಯಾರಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ತಿಳಿಸಿದರು.

....2

5. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ e-Office ಅನುಷ್ಠಾನ ಮಾಡಲು EMD ಯನ್ನು ತಯಾರಿಸುವ ಹಾಗೂ e-Office ಬಳಕೆದಾರರಿಗೆ gov.in domain ಅಡಿಯಲ್ಲಿ mail id ಗಳನ್ನು ಸೃಜಿಸುವ ಅವಶ್ಯಕತೆ ಇರುತ್ತದೆ ಎಂದು ಯೋಜನಾ ನಿರ್ದೇಶಕರು, e-Office ರವರು ಸಭೆಗೆ ತಿಳಿಸಿದರು ಹಾಗೂ e-Office ಅನುಷ್ಠಾನ ಮಾಡಲು EMD ಗಳನ್ನು ತಯಾರಿಸುವ ಬಗ್ಗೆ ಹಾಗೂ e-Office ಅನುಷ್ಠಾನ ಮಾಡುವ ಬಗ್ಗೆ ತರಬೇತಿಯನ್ನು ಸಿಆಸು(ಇ-ಆಡಳಿತ) ಇಲಾಖೆ ವತಿಯಿಂದ ನೀಡಲಾಗುವುದು ಎಂದು ತಿಳಿಸಿದರು.

6. e-Office ಅನುಷ್ಠಾನ ಮಾಡಲು ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ನೋಡಲ್ ಅಧಿಕಾರಿಗಳು ಮತ್ತು Master trainers ಗಳನ್ನು ನೇಮಿಸಬೇಕಾಗುತ್ತದೆ ಎಂದು ಯೋಜನಾ ನಿರ್ದೇಶಕರು, e-Office ರವರು ಸಭೆಗೆ ತಿಳಿಸಿದರು.

7. ಈಗಾಗಲೇ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ e-Office ಅನುಷ್ಠಾನ ಮಾಡಲು ಯೋಜನಾ ನಿರ್ದೇಶಕರುಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಮತ್ತು DPM, DMIS, ADPC ರವರನ್ನು ಒಳಗೊಂಡಂತೆ Master trainers ತಂಡವನ್ನು ರಚಿಸಲಾಗಿದೆ ಎಂದು ರಾಜ್ಯ ಯೋಜನಾ ವ್ಯವಸ್ಥಾಪಕರು ಸಭೆಯ ಗಮನಕ್ಕೆ ತಂದರು.

8. ಅದರಂತೆ ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಸಹಾಯಕ ನಿರ್ದೇಶಕರುಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ಹಾಗೂ ತಾಲ್ಲೂಕು MIS Co-ordinator ಗಳನ್ನು Master trainers ಗಳನ್ನಾಗಿ ನೇಮಿಸಿ ಆದೇಶ ಹೊರಡಿಸುವುದಾಗಿ ಉಪಕಾರ್ಯದರ್ಶಿ, ಆಡಳಿತ-1 ರವರು ತಿಳಿಸಿದರು.

9. ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳಿಗೆ ಮತ್ತು ಒಬ್ಬ Master trainer ಗಳಿಗೆ ರಾಜ್ಯ ಮಟ್ಟದಲ್ಲಿ ಎರಡು ದಿನದ ಕಾರ್ಯಾಗಾರವನ್ನು ಆಯೋಜಿಸಲು ಯೋಜನಾ ನಿರ್ದೇಶಕರು, e-Office ಸಲಹೆ ನೀಡಿದರು. ಮೊದಲು ಎರಡು ದಿನ 15 ಜಿಲ್ಲೆಗಳಿಗೆ ಮತ್ತು ಇನ್ನುಳಿದ 15 ಜಿಲ್ಲೆಗಳಿಗೆ ನಂತರದ ಎರಡು ದಿನ ತರಬೇತಿ ನೀಡಬೇಕಾಗಿ ತೀರ್ಮಾನಿಸಲಾಯಿತು. ಸದರಿ ತರಬೇತಿಯನ್ನು ದಿನಾಂಕ:05.03.2019 ರಿಂದ 08.03.2019 ರವರೆಗೆ ಆಯೋಜಿಸಲು ತೀರ್ಮಾನಿಸಲಾಯಿತು.

10. ಸದರಿ ತರಬೇತಿಗೆ ಯೋಜನಾ ನಿರ್ದೇಶಕರು ಮತ್ತು ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳನ್ನು ನಿಯೋಜಿಸುವುದಾಗಿ ಉಪಕಾರ್ಯದರ್ಶಿ, ಆಡಳಿತ-1 ರವರು ತಿಳಿಸಿದರು. ದಿನಾಂಕ:05.03.2019 ರಂದು ಮೊದಲ 15 ಜಿಲ್ಲೆಗಳ ಯೋಜನಾ ನಿರ್ದೇಶಕರುಗಳು ಹಾಗೂ ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳಿಗೆ ತರಬೇತಿಯನ್ನು ಆಯೋಜಿಸುವುದು. ದಿನಾಂಕ:06.03.2019 ರಂದು ಆ ಜಿಲ್ಲೆಗಳ Master trainer ಗಳಿಗೆ ತರಬೇತಿ ನೀಡುವುದು ಮತ್ತು ದಿನಾಂಕ:07.03.2019 ರಂದು ಎರಡನೇ ಹಂತದ 15 ಜಿಲ್ಲೆಗಳ ಯೋಜನಾ ನಿರ್ದೇಶಕರುಗಳು ಮತ್ತು ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳಿಗೆ ತರಬೇತಿಯನ್ನು ಆಯೋಜಿಸುವುದು ಹಾಗೂ ದಿನಾಂಕ:08.03.2019 ರಂದು ಸದರಿ ಜಿಲ್ಲೆಗಳ Master trainer ಗಳಿಗೆ ತರಬೇತಿ ನೀಡುವುದು.

11. ರಾಜ್ಯ ಮಟ್ಟದಲ್ಲಿ ತರಬೇತಿಯನ್ನು ಆಯೋಜಿಸಿದ ನಂತರ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮಟ್ಟದ ಎಲ್ಲಾ ನೋಡಲ್ ಅಧಿಕಾರಿಗಳು ಮತ್ತು Master trainer ಗಳಿಗೆ ವಿಭಾಗವಾರು ತರಬೇತಿಯನ್ನು ಆಯೋಜಿಸಲು ಉಪಕಾರ್ಯದರ್ಶಿ, ಆಡಳಿತ-1 ರವರು ಕೋರಿದ

ಮೇರೆಗೆ ತರಬೇತಿಯನ್ನು ವಿಭಾಗವಾರು ಆಯೋಜಿಸುವುದಾಗಿ ಯೋಜನಾ ನಿರ್ದೇಶಕರು, e-Office ರವರು ತಿಳಿಸಿದರು.

12. e-Office ಅನುಷ್ಠಾನ ಮಾಡಲು ಬೇಕಾದ KSWAN ಸೌಲಭ್ಯವು ಕೆಲವೊಂದು ಜಿಲ್ಲೆಗಳಲ್ಲಿ ಹಾಗೂ ಯಾವುದೇ ತಾಲ್ಲೂಕು ಪಂಚಾಯತಿಗಳಲ್ಲಿ ಇರುವುದಿಲ್ಲ ಎಂದು ತಾಂತ್ರಿಕ ಸಮಾಲೋಚಕರು ಸಭೆಗೆ ತಿಳಿಸಿದರು ಹಾಗೂ ಈ ಸಂಬಂಧ ಕ್ರಮಕೈಗೊಳ್ಳಲು ಯೋಜನಾ ನಿರ್ದೇಶಕರು, KSWAN ರವರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಿಂದ ಈಗಾಗಲೇ ಪತ್ರಿಸಲಾಗಿದ್ದು, ಕ್ರಮಕೈಗೊಳ್ಳುವಂತೆ ಕೋರಿದರು.

13. ಯೋಜನಾ ನಿರ್ದೇಶಕರು, e-Office ರವರು ಮಾತನಾಡಿ KSWAN ಸಂಬಂಧ ಗ್ರಾಅಪ ಇಲಾಖೆಯಿಂದ ಮುಖ್ಯ ಕಾರ್ಯಾಚರಣೆ ಅಧಿಕಾರಿ, CeG ರವರೊಂದಿಗೆ ಸಂಯೋಜನೆ ಮಾಡಿ ಈ ಬಗ್ಗೆ ಮೇಲ್ವಿಚಾರಣೆ ಮಾಡಿ KSWAN ಸೌಲಭ್ಯವನ್ನು ಒದಗಿಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

14. e-Office ಅನುಷ್ಠಾನ ಮಾಡಲು ತಯಾರಿಸಿದ EMD ಗಳನ್ನು upload ಮಾಡಲು ಹಾಗೂ role management ನಿರ್ವಹಣೆಗೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳಿಗೆ admin ಲಾಗಿನ್ ನೀಡುವುದಾಗಿ ಯೋಜನಾ ನಿರ್ದೇಶಕರು, e-Office ರವರು ಸಭೆಗೆ ತಿಳಿಸಿದರು ಹಾಗೂ ತಾಲ್ಲೂಕು ಮಟ್ಟದಲ್ಲಿ admin ಲಾಗಿನ್ ಅವಶ್ಯಕತೆ ಇದೆಯೇ ಎಂಬ ಬಗ್ಗೆ ಉಪಕಾರ್ಯದರ್ಶಿ, ಆಡಳಿತ-1 ಇವರ ಅಭಿಪ್ರಾಯ ಕೋರಿದರು. ಅದರಂತೆ ಉಪಕಾರ್ಯದರ್ಶಿ, ಆಡಳಿತ-1 ರವರು ತಾಲ್ಲೂಕು ಮಟ್ಟದಲ್ಲಿ role management ನಿರ್ವಹಣೆಗೆ ಜಿಲ್ಲಾ ಅಥವಾ ರಾಜ್ಯ ಮಟ್ಟದಲ್ಲಿ ಕಷ್ಟ ಸಾಧ್ಯವಾಗುವುದರಿಂದ ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಶಕರುಗಳಿಗೆ ನೀಡುವುದು ಸೂಕ್ತ ಎಂದು ತಿಳಿಸಿದರು.

15. ಗ್ರಾಅಪ ಇಲಾಖೆಯ ಅನುಷ್ಠಾನ ಇಲಾಖೆಗಳು ಮತ್ತು ಅಧೀನ ಸಂಸ್ಥೆಗಳಾದ KRRDA, KRIDL, PRED, KRWSSA, Biofuel Board, ANSSIRD&PR, MGIRED ಗಳಿಗೆ 05.03.2019 ರಿಂದ 08.03.2019 ರವರೆಗೆ ತರಬೇತಿಯನ್ನು ಆಯೋಜಿಸಲು ತೀರ್ಮಾನಿಸಿದಂತೆ ಸದರಿ ಇಲಾಖೆ ಮತ್ತು ಸಂಸ್ಥೆಗಳಿಂದ ನೋಡಲ್ ಅಧಿಕಾರಿಗಳು ಮತ್ತು Master Trainer ಗಳಿಗೆ ತರಬೇತಿ ನೀಡಲು ತೀರ್ಮಾನಿಸಲಾಯಿತು ಮತ್ತು ಸದರಿ 07 ಅಧೀನ ಸಂಸ್ಥೆಗಳಿಗೆ 07 admin ಲಾಗಿನ್ ನೀಡಲು ತೀರ್ಮಾನಿಸಲಾಯಿತು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/09/ಗ.ಕೋಶ/2019
ದಿನಾಂಕ:27.02.2019

(ಎಸ್.ಎಂ. ಜುಲ್‌ಫಿಖಾರ್‌ಉಲ್ಲಾ)
ನಿರ್ದೇಶಕರು (ಇ-ಆಡಳಿತ) (ಪ್ರ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

.....4

ಇವರಿಗೆ:

1. ಉಪಕಾರ್ಯದರ್ಶಿಗಳು, ಆಡಳಿತ-1, ಗ್ರಾಅಪ ಇಲಾಖೆ, ಬೆಂಗಳೂರು.
2. ಉಪಕಾರ್ಯದರ್ಶಿಗಳು, ಆಡಳಿತ-2, ಗ್ರಾಅಪ ಇಲಾಖೆ, ಬೆಂಗಳೂರು.
3. ಹೆಚ್.ಎಲ್. ಪ್ರಭಾಕರ, ಯೋಜನಾ ನಿರ್ದೇಶಕರು, ಸಿಆಸು(ಇ-ಆಡಳಿತ) ಇಲಾಖೆ, ಬೆಂಗಳೂರು.
4. ಸತೀಶ ಎಂ.ಆರ್. ಯೋಜನಾ ವ್ಯವಸ್ಥಾಪಕರು (ಇ-ಆಫೀಸ್), ಸಿಇಜಿ, ಸಿಆಸು(ಇ-ಆಡಳಿತ) ಇಲಾಖೆ, ಬೆಂಗಳೂರು.
5. ಅಧೀನ ಕಾರ್ಯದರ್ಶಿಗಳು, ಗ್ರಾ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
6. ಅಧೀನ ಕಾರ್ಯದರ್ಶಿಗಳು, ಜಿ.ಪಂ. ಶಾಖೆ, ಗ್ರಾಅಪ ಇಲಾಖೆ, ಬೆಂಗಳೂರು.
7. ಸಹಾಯಕ ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
8. ಶಿಲ್ಪ ಈ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಿಯೋಜನೆ(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
9. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
10. ತಾಂತ್ರಿಕ ಸಮಾಲೋಚಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.

ಪ್ರತಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.